


# ಅಪ್‌ಡೇಟ್‌ಗೆ ಸಿಇಆರ್‌ಟಿ–ಇನ್ ಸೂಚನೆ

■ **ಶಶಿಕುಮಾರ್ ಸಿ.**

ಗೂಗಲ್ ಕ್ರೋಮ್ ಬ್ರೌಸರ್‌ನ ದೌರ್ಬಲ್ಯದ ಬಗ್ಗೆ ವರದಿ ಮಾಡಿರುವ ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಕ್ರಿಯೆ ತಂಡವು (CERT In), 'ಈ ದುರ್ಬಲತೆಯು ರಿಮೋಟ್ ಮೂಲಕ ಹ್ಯಾಕರ್ಸ್‌ಗೆ ಕಂಪ್ಯೂಟರ್‌ನಲ್ಲಿನ ಅನಿಯಂತ್ರಿತ ಕೋಟ್ ಅನ್ನು ಕಾರ್ಯಗತಗೊಳಿಸಲು ಅನುವು ಮಾಡಿಕೊಡುತ್ತದೆ' ಎಂದೂ ಎಚ್ಚರಿಸಿದೆ. ಅಲ್ಲದೇ ಕೂಡಲೇ ಕ್ರೋಮ್ ಬ್ರೌಸರ್ ಅನ್ನು ಅಪ್‌ಡೇಟ್ ಮಾಡಿಕೊಳ್ಳಿ ಎಂದೂ ತಿಳಿಸಿದೆ.

ಅಂತರ್ಜಾಲದ ಬ್ರೌಸರ್‌ನಲ್ಲಿನ ನಿರ್ಣಾಯಕ ದೋಷಗಳನ್ನು ಸರಿಪಡಿಸಲು ಕ್ರೋಮ್ ಬ್ರೌಸರ್ ಆವೃತ್ತಿ 99ರ ತುರ್ತು ಪರಿಷ್ಕೃತ ಆವೃತ್ತಿ ಹೊರತರಲಾಗಿದೆ. ಕ್ರೋಮ್‌ನಲ್ಲಿನ ದೋಷಗಳ ಬಗ್ಗೆ ಸಿಇಆರ್‌ಟಿ–ಇನ್ ಗೂಗಲ್ ಕಂಪನಿಗೆ ತಿಳಿಸಿದ್ದು, ಅವುಗಳಿಗೆ ಪರಿಹಾರವನ್ನು ಕಂಡುಕೊಂಡು ಅಪ್‌ಡೇಟೆಡ್ ವರ್ಷನ್‌ಗೆ (99.0.4844.84) ತಕ್ಷಣವೇ ಅಪ್‌ಡೇಟ್ ಆಗುವಂತೆ ಈ ತಂಡವು ಸೂಚಿಸಿದೆ.

ಕ್ರೋಮ್‌ನಲ್ಲಿನ ವಿ8 ಜಾವಾಸ್ಕ್ರಿಪ್ಟ್ ಇಂಜಿನ್ ಕಾಂಪೊನೆಂಟ್ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸದೇ ಹಲವು ಗೊಂದಲ ಸೃಷ್ಟಿಸುತ್ತಿದೆ. ಈ ಗೊಂದಲದ ದೋಷದಿಂದಾಗಿರುವ ಸಮಸ್ಯೆಯ ಕ್ರೋಮ್‌ನಲ್ಲಿ ಹಲವು ಅನಾಹುತಗಳಿಗೆ ಎಡೆಮಾಡಿಕೊಡುತ್ತದೆ. ಹ್ಯಾಕರ್ಸ್ ಅಥವಾ ರಿಮೋಟ್ ಆಕ್ರಮಣಕಾರರು ವಿಶೇಷ ವೆಬ್‌ಪುಟ ರಚಿಸುವ ಮೂಲಕ ಕ್ರೋಮ್‌ನ ದುರ್ಬಲತೆಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳಬಹುದು. ಈ ಅಂಶವನ್ನು ಗುರುತಿಸಿರುವ ತಂಡವು ಈ ಕ್ರಮಕ್ಕೆ ಸೂಚಿಸಿದೆ.

ಮೊಜಿಲ್ಲಾ ಫೈರ್‌ಫಾಕ್ಸ್ ಬಳಕೆದಾರರಿಗೂ ಸಹ ಇದೇ ರೀತಿಯ ಸಲಹೆಯನ್ನು ಸಿಇಆರ್‌ಟಿ–ಇನ್ ನೀಡಿತ್ತು. 'ಭದ್ರತಾ ನಿರ್ಬಂಧಗಳನ್ನು ಬೈಪಾಸ್ ಮಾಡಲು, ವಂಚನೆ ಮಾಡಲು, ಅನಿಯಂತ್ರಿತ ಕೋಡ್ ಅನ್ನು ಕಾರ್ಯಗತಗೊಳಿಸಲು, ಸೂಕ್ಷ್ಮ ಮಾಹಿತಿಯನ್ನು ಕದಿಯಲು ಮತ್ತು ಉದ್ದೇಶಿತ ವ್ಯವಸ್ಥೆಯ ಮೇಲೆ ಸೇವಾ ನಿರಾಕರಣೆಯ ದಾಳಿಯನ್ನು ಉಂಟು ಮಾಡಲು ಹ್ಯಾಕರ್‌ಗಳು ಬಳಸಬಹುದಾದ ಹಲವಾರು ಭದ್ರತಾ ದೋಷಗಳು ಮೊಜಿಲ್ಲಾ ಫೈರ್‌ಫಾಕ್ಸ್‌ನ ಉತ್ಪನ್ನಗಳಲ್ಲಿ ಕಂಡುಬಂದಿವೆ' ಎಂದು ಎಚ್ಚರಿಸಿತ್ತು. ■

# ಸೋಷಿಯಲ್ ಮೀಡಿಯಾದತ್ತ ಎಲಾನ್ ಮಸ್ಕ್?



ಹಿಂಸೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳಿಗೆ ವಿಧಿಸಿದ್ದ ನಿಷೇಧಕ್ಕೆ ಸಿಡಿದಿದ್ದ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಟ್ರೂಥ್ ಸೋಷಿಯಲ್ ಮೀಡಿಯಾ ಆ್ಯಪ್' ಹೊರತಂದಿದ್ದರು. ಅಂತೆಯೇ ಬಾಹ್ಯಾಕಾಶ ಸೇವೆಯಲ್ಲಿ ಮಹತ್ತರ ಸಾಧನೆಗೈದ ಸ್ಪೇಸ್ ಎಕ್ಸ್ ಸಂಸ್ಥೆಯ ಎಲಾನ್ ಮಸ್ಕ್ ಟ್ವಿಟರ್‌ನ ಕೆಲ ಲೋಪಗಳ ಬಗ್ಗೆ ದನಿ ಎತ್ತಿದ್ದು, ತನ್ನದೇ ಹೊಸ ಸೋಷಿಯಲ್ ಮೀಡಿಯಾದತ್ತ ಮುಖಮಾಡುವ ಸುಳಿವು ನೀಡಿದ್ದಾರೆ.

ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೂ ಆಗಿರುವ ಎಲಾನ್ ಮಸ್ಕ್ ಅವರು, 'ತಮ್ಮದೇ ಆದ ಸಾಮಾಜಿಕ ಮಾಧ್ಯಮವೊಂದನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸಿ ನಡೆದಿದೆ' ಎಂದು ಟ್ವಿಟರ್‌ನಲ್ಲಿ ಈಚೆಗೆ ಹೇಳಿಕೊಂಡಿದ್ದಾರೆ. ಖಾಸಗಿಯಾಗಿ ಬಾಹ್ಯಾಕಾಶ ಕ್ಷೇತ್ರಕ್ಕೆ ಎಲಾನ್ ಮಸ್ಕ್ ಕಾಲಿಟ್ಟಾಗ ಸಾಕಷ್ಟು ಮಂದಿ ಅವರನ್ನು ಹುಚ್ಚರೆಂದೇ ಕರೆದಿದ್ದರು. ಹತ್ತಾರು ವೈಫಲ್ಯಗಳ ನಡುವೆಯೂ ಇಡೀ ಜಗತ್ತು ತನ್ನತ್ತ ತಿರುಗಿ ನೋಡುವಂತೆ ಮಾಡಿದ ಅವರು ಯಾವ ರೀತಿಯ ಸೋಷಿಯಲ್ ಮೀಡಿಯಾವನ್ನು ಹುಟ್ಟುಹಾಕಲಿದ್ದಾರೆಂಬ ಸುಳಿವೂ ಬಿಟ್ಟುಕೊಟ್ಟಿಲ್ಲ.

'ವಾಕ್ ಸ್ವಾತಂತ್ರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿರುವ' ಮತ್ತು 'ಅತ್ಯಂತ ಕಡಿಮೆ ಪ್ರಚಾರ ನೀಡುವಂತಹ' ಸಾಮಾಜಿಕ ಜಾಲತಾಣವನ್ನು ಪ್ರಾರಂಭಿಸುತ್ತೀರಾ ಎಂಬ ಪ್ರಶ್ನೆಯನ್ನು ಟ್ವೀಟ್ ಮೂಲಕ ಒಬ್ಬಾತ ಎಲಾನ್ ಅವರನ್ನು ಕೇಳಿದ್ದ. ಅದಕ್ಕೆ ಪ್ರತಿಕ್ರಿಯಿಸಿರುವ ಎಲಾನ್, 'ಸೋಷಿಯಲ್ ಮೀಡಿಯಾ ಆರಂಭಿಸುವ ಬಗ್ಗೆ ತಾನು ಗಂಭೀರವಾಗಿ ಚಿಂತನೆ ನಡೆಸುತ್ತಿದ್ದೇನೆ' ಎಂದಿದ್ದಾರೆ. ಈಚೆಗಷ್ಟೇ ಟ್ವಿಟರ್‌ನ ಅಲ್ಗಾರಿದಮ್ ಅನ್ನು ಎಲಾನ್ ಮಸ್ಕ್ ಟೀಕಿಸಿದ ನಂತರ ಈ ಬೆಳವಣಿಗೆ ಕಂಡುಬಂದಿದ್ದು, ಟ್ರಂಪ್‌ನಂತೆ ಹಟಕ್ಕೆ ಬಿದ್ದು ಅವರೂ ಸಹ ದೊಡ್ಡ ಮಟ್ಟದ ಸೋಷಿಯಲ್ ಮೀಡಿಯಾ ಆರಂಭಿಸುವ ಸಾಧ್ಯತೆಗಳು ದಟ್ಟವಾಗಿವೆ.

'ಅಲ್ಗಾರಿದಮ್' ಅನ್ನು ಟೀಕಿಸಿದ ನಂತರ ಅವರು, 'ಮುಕ್ತ ವಾಕ್ ತತ್ವಗಳಿಗೆ ಟ್ವಿಟರ್ ಕಠಿಣ ಬದ್ಧವಾಗಿದೆಯೇ' ಎಂದು ತನ್ನ ಫಾಲೋವರ್ಸ್ ಅನ್ನು ಕೇಳಿದ್ದರು. ಆ ಪ್ರಕ್ರಿಯೆಯನ್ನು ಅವರು ಸಮೀಕ್ಷೆಯಾಗಿಯೂ ನಡೆಸಿದ್ದರು. ಅದಕ್ಕೆ ಸುಮಾರು ಎರಡು ಮಿಲಿಯನ್ ಮತಗಳ ಪ್ರತಿಕ್ರಿಯೆಗಾಗಿ ಸಿಕ್ಕಿದ್ದು, ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇಕಡ 70ರಷ್ಟು ಮಂದಿ, 'ವಾಕ್ ಸ್ವಾತಂತ್ರ್ಯಕ್ಕೆ ಟ್ವಿಟರ್ ಬದ್ಧವಾಗಿಲ್ಲ' ಎಂಬ ಅಭಿಪ್ರಾಯವನ್ನು ಹೊರಹಾಕಿದ್ದರು. ಆ ಸೋಷಿಯಲ್ ಮೀಡಿಯಾ ಹುಟ್ಟುಹಾಕುವ ಪ್ರಶ್ನೆಗೆ ಸಕಾರಾತ್ಮಕವಾಗಿ ಅವರು ಸ್ಪಂದಿಸಿದ್ದು. 'ಕ್ರಿಯಾತ್ಮಕ ಪ್ರಜಾಪ್ರಭುತ್ವಕ್ಕೆ ವಾಕ್ ಸ್ವಾತಂತ್ರ್ಯ ಅತ್ಯಗತ್ಯ' ಎಂದು ಅವರು ಹೇಳಿದ್ದರು. ■